ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

ಸಂಖ್ಯೆ:ಬೆಂಅಪ್ರಾ:ನಯೋಸ:ಸಿಎಲ್‌ಯು: 40/2057/2011-12.
No. :

ದಿನಾಂಕ :
Date : 19-07-11

# ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ಸಂ. 46/1, 46/2A, 47 ಮತ್ತು ಬೆಳ್ಳಂದೂರು ಗ್ರಾಮದ ಸರ್ವೆ ಸಂ.11/p,18/2, 18/3, 19/1,19/2,19/3,19/4,19/5,19/7 ರಲ್ಲಿನ ಒಟ್ಟು 06 ಎಕರೆ 03 ಗುಂಟೆ ವಿಸ್ತೀರ್ಣದ ಪೈಕಿ RMP-2015 ರಂತೆ ಕೈಗಾರಿಕೆ(ಹೈಟೆಕ್) ಪ್ರದೇಶದಲ್ಲಿರುವ 04 ಎಕರೆ 28 ಗುಂಟೆ ಪ್ರದೇಶವನ್ನು ಕೈಗಾರಿಕೆ(ಹೈಟೆಕ್) ಉಪಯೋಗದಿಂದ ವಾಣಿಜ್ಯ ಉಪಯೋಗಕ್ಕೆ KTCP ಕಾಯ್ದೆ 1961 ರ ಕಲಂ 14 (A) (3) ರಡಿ ಶ್ರೀ.ರಮಣೀ ಶಾಸ್ತ್ರಿ, ಮ್ಯಾನೇಜಿಂಗ್ ಡೈರೆಕ್ಟರ್ M/s Sterling Urban Infra projects ಇವರ ಪರವಾಗಿ ಅನುಮತಿಸುವ ಕುರಿತು.

1. ಅರ್ಜಿದಾರರ ಪತ್ರ ದಿನಾಂಕ 25.02.2011.
2. ಬೆ.ಅ.ಪ್ರಾಧಿಕಾರದ ಸಮಿತಿ ಸಭೆಯ ವಿಷಯ ಸಂಖ್ಯೆ 126/2011,ದಿನಾಂಕ 13-06.2011 ರ ತೀರ್ಮಾನ.
3. ಅರ್ಜಿದಾರರು ದಿನಾಂಕ 10.06.2011 ರಂದು ಕೆನರಾ ಬ್ಯಾಂಕ್ ಚಲನ್ ನಂ. 4713 ರ ಮೂಲಕ ಉತ್ತಮತೆ ಶುಲ್ಕ ₹3,80,399/- ಮತ್ತು ಪರಿಶೀಲನಾ ಶುಲ್ಕ ರೂ.9,510/- ಹಾಗೂ ಪೂರ್ಣಾಂಕಕ್ಕೆ ₹ 91/- ಒಟ್ಟು ₹ 3,90,000/- ಅನ್ನು ಪಾವತಿಸಿರುತ್ತಾರೆ. ಸದರಿ ಮೊಬಲಗು ಪ್ರಾಧಿಕಾರದ ಲೆಕ್ಕಕ್ಕೆ ಜಮಾ ಆಗಿರುವ ಬಗ್ಗೆ ಬೆಂಅಪ್ರಾದ ಆರ್ಥಿಕ ವಿಭಾಗದವರು ದಿನಾಂಕ 2.7.2011 ರಂದು ದೃಢೀಕರಿಸಿರುವುದು.

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ಸಂ. 46/1, 46/2A, 47 ಮತ್ತು ಬೆಳ್ಳಂದೂರು ಗ್ರಾಮದ ಸರ್ವೆ ಸಂ.11/p, 18/2, 18/3, 19/1, 19/2, 19/3, 19/4, 19/5, 19/7 ರಲ್ಲಿನ ಒಟ್ಟು 06 ಎಕರೆ 03 ಗುಂಟೆ ವಿಸ್ತೀರ್ಣದ ಪೈಕಿ RMP-2015 ರಂತೆ ಕೈಗಾರಿಕೆ(ಹೈಟೆಕ್) ಪ್ರದೇಶದಲ್ಲಿರುವ 04 ಎಕರೆ 28 ಗುಂಟೆ ಪ್ರದೇಶವನ್ನು ಕೈಗಾರಿಕೆ(ಹೈಟೆಕ್) ಉಪಯೋಗದಿಂದ ವಾಣಿಜ್ಯ ಉಪಯೋಗಕ್ಕೆ KTCP ಕಾಯ್ದೆ 1961 ರ ಕಲಂ 14 (A) (3) ರಡಿ ಕೋರಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಸಂಬಂಧ ಉಲ್ಲೇಖ (2) ರಲ್ಲಿನ ಪ್ರಾಧಿಕಾರದ ಸಮಿತಿ ಸಭೆಯ ತೀರ್ಮಾನದಂತೆ RMP-2015 ರಂತೆ ಕೈಗಾರಿಕೆ(ಹೈಟೆಕ್) ಪ್ರದೇಶ 04 ಎಕರೆ 28 ಗುಂಟೆ ಪ್ರದೇಶವನ್ನು ವಾಣಿಜ್ಯ (C3) ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆಗೆ KTCP ಕಾಯ್ದೆ ಕಲಂ 14-A(3) ರಂತೆ ಕ್ರಮ ಜರುಗಿಸುವ ಕುರಿತು ಉತ್ತಮತೆ ಶುಲ್ಕ ಹಾಗೂ ಪರಿಶೀಲನಾ ಶುಲ್ಕದ ಬಾಬ್ತು ಒಟ್ಟು ಮೊತ್ತ ₹ 3,90,000/- ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ತಿಳಿಸಿದ್ದು, ಅದರಂತೆ ಉಲ್ಲೇಖ (3) ರ ಪ್ರಕಾರ ಅರ್ಜಿದಾರರು ₹3,90,000/- ಗಳನ್ನು ಪಾವತಿ ಮಾಡಿರುತ್ತಾರೆ. ಹಾಗೂ ಸದರಿ ಮೊಬಲಗು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಜಮಾ ಆಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದೃಢೀಕರಿಸಿರುತ್ತಾರೆ.

ಪು.ತಿ.ನೋ.

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore - 560 020. Facsimile : 2334 5799, E-mail : bda@vsnl.com

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A, Sub Section (3) ರಂತೆ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ಸಂ. 46/1, 46/2A, 47 ಮತ್ತು ಬೆಳ್ಳಂದೂರು ಗ್ರಾಮದ ಸರ್ವೆ ಸಂ.11/p, 18/2, 18/3, 19/1, 19/2, 19/3, 19/4, 19/5, 19/7 ರಲ್ಲಿ RMP-2015 ರಂತೆ ಕೈಗಾರಿಕೆ(ಹೈಟೆಕ್) ಪ್ರದೇಶ 04 ಎಕರೆ 28 ಗುಂಟೆ ಪ್ರದೇಶವನ್ನು ವಾಣಿಜ್ಯ (C3) ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡಿ ಈ ಕೆಳಕಂಡ ನಿಭಂದನೆಗಳಿಗೊಳಪಡಿಸಿ ಅನುಮತಿ ನೀಡಲಾಗಿದೆ.

1. ಉಳಿದ ನಾಲಾ ಪ್ರದೇಶ 01 ಎಕರೆ 15 ಗುಂಟೆ ( 0- 04 ಗುಂಟೆ ಖರಾಬು ಸೇರಿ) KTCP ಕಾಯ್ದೆ 1961 ರ ಕಲಂ 14 (A) ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
2. ಪ್ರಸ್ತಾಪಿತ ಪ್ರದೇಶಕ್ಕೆ ವಾಣಿಜ್ಯ(ವಾಣಿಜ್ಯ ಸಂಕೀರ್ಣ) ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಮಂಜೂರು ಮಾಡಿಸಿಕೊಳ್ಳುವುದು.
3. ಸದರಿ ವಾಣಿಜ್ಯ (ವಾಣಿಜ್ಯ ಸಂಕೀರ್ಣ) ಉದ್ದೇಶದ ಕಟ್ಟಡಕ್ಕೆ ನಿಯಮಾನುಸಾರ ವಾಹನ ನಿಲುಗಡೆಗೆಗಾಗಿ ಅರ್ಜಿದಾರರ ಪ್ರದೇಶದಲ್ಲೇ ಸ್ಥಳಾವಕಾಶ ಒದಗಿಸತಕ್ಕದ್ದು.
4. ಅವಶ್ಯವಿದ್ದಲ್ಲಿ ಕಟ್ಟಡ ನಿರ್ಮಾಣಕ್ಕೆ ಮುನ್ನ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು. ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ಪಾಲಿಸತಕ್ಕದ್ದು.
5. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಹಾಗೂ ಈ ಸ್ವತ್ತಿನ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣವೇನಾದರೂ ಉದ್ಭವಿಸಿದಲ್ಲಿ ಅದಕ್ಕೆ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ-ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರ ನಿಭಂದನೆಗಳನ್ನು ಪಾಲಿಸತಕ್ಕದ್ದು.
7. ಅಭಿವೃದ್ಧಿ ಕಾರ್ಯಕೈಗೊಳ್ಳುವ ಪೂರ್ವದಲ್ಲಿ ಉತ್ತಮತೆ ಕರ (Betterment Tax) ವನ್ನು ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
8. ಪ್ರಸ್ತಾಪಿತ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವಾಗ CSR ಕೆಲಸಗಳನ್ನು ಮಾಡುವುದು.

ಕರಡು ಪತ್ರ ಆಯುಕ್ತರಿಂದ
ಅನುಮೋದನೆಯಾಗಿದೆ)

18/7/11

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು.

ಇವರಿಗೆ,

ಶ್ರೀ. ರಮಣೀ ಶಾಸ್ತ್ರಿ ರವರು,
ಮ್ಯಾನೇಜಿಂಗ್ ಡೈರೆಕ್ಟರ್,
ಸ್ಟೆರ್ಲಿಂಗ್ ಅರ್ಬನ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈ. ಲಿ.,
ನಂ.8,ಕಬ್ಬನ್ ರಸ್ತೆ , ಪ್ರಿಸ್ಟೀಜ್ ನೆಬುಲ,
ಇನ್‌ಕಮ್‌ಟ್ಯಾಕ್ಸ್ ಬಿಲ್ಡಿಂಗ್ ಎದುರು,
**ಬೆಂಗಳೂರು-560 001.**